ಇನ್ನೊಬ್ಬ ಲೇಬರ್ ಲೀಡರ್ ಬೆನಡಿಕ್ಟ್ ಡಿಸೋಜನ ಬೆಳವಣಿಗೆ ಮುರಿಯಲು ಇವನನ್ನು ಹುಟ್ಟಿ ಹಾಕಿದೆ. ಡಿಸೋಜ ಯಾವ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡನೋ ಗೊತ್ತಿಲ್ಲ. ಆ ಕೇಸ್‌ನಲ್ಲಿ ಇವನನ್ನು ಸಿಕ್ಕಿಸಬಹುದಿತ್ತು, ಆದರೆ ಪೊಲೀಸ್ ಟಾಪ್ ಲೆವೆಲ್‌ನಲ್ಲಿ ಮಾತನಾಡಿ ನಾನೇ ಸೇಫ್ ಮಾಡಿದ್ದೆ . ನಮ್ಮ ಮಾಧವನ್ ಪಿಳ್ಳೈ ಮತ್ತು ಡಿಸೋಜನ ನಡುವೆ ಸಣ್ಣ ಕಾನ್‌ಫ್ಲಿಕ್ಟ್ ಇತ್ತು. ಬ್ಯಾಲೆನ್ಸ್ ಆಫ್ ಟೆರರ್ ವಿದ್ಯೆಯನ್ನು ಈಗ ನನಗೇ ತಿರುಗಿಸಿ ಬಿಟ್ಟಿದ್ದಾನೆ. ಆದರೆ ನನಗೆ ಕಾರ್ಮಿಕರ ಕೊರತೆ ಇದುವರೆಗೂ ಉಂಟಾಗಿಲ್ಲ. ನನ್ನ ಹತ್ತಿರ ಕಾಯಂ ಕಾರ್ಮಿಕರೇ ಬೇಕಾದಷ್ಟು ಜನ ಇದಾರೆ. ಅವರು ಕೊಡುವುದಕ್ಕಿಂತ ಐವತ್ತು ರೂಪಾಯಿ ಜಾಸ್ತಿ ಕೂಲಿಯನ್ನೇ ನಾನು ಕೊಡುತ್ತೇನೆ. ನಾನು ಮನಸ್ಸು ಮಾಡಿದರೆ ಅವನನ್ನು ತಣ್ಣಗೆ ಮಾಡೋದು ದೊಡ್ಡ ಕೆಲಸವೇನು ಅಲ್ಲ. ಆದರೆ ಯಾಕೋ ಇತ್ತೀಚೆಗೆ ಯಾರೊಡನೆಯಾದರೂ ಸಂಘರ್ಷಕ್ಕೆ ಇಳಿಯಬೇಕೆಂದರೆ ಮನಸ್ಸು ಹಿಂಜರಿಯುತ್ತದೆ...' ಸುದೀರ್ಘವಾಗಿ ಮಾತನಾಡಿ ಗ್ಲಾಸಿನಲ್ಲಿದ್ದ ವಿಸ್ಕಿಯನ್ನು ಖಾಲಿ ಮಾಡಿದ್ದರು.

'ನಿಮ್ಮಲ್ಲಿ ಅಧ್ಯಾತ್ಮದ ಲಕ್ಷಣಗಳು ಕಾಲಿಡಲು ಪ್ರಾರಂಭಿಸಿವೆ ಅನ್ನಿಸುತ್ತಿದೆ ನನಗೆ. ಅಧ್ಯಾತ್ಮ ಮತ್ತು ಭೌತಿಕ ಸಂಪತ್ತು ಒಟ್ಟಿಗೆ ಹೋಗಲಾರವು ಎಂಬ ನಂಬಿಕೆ ಹಿಂದೆ ಇತ್ತು. ಆದರೆ ಇವೊತ್ತು ಅಧ್ಯಾತ್ಮದ ಕಡೆ ವಾಲಿದ ಜನರೂ ಕೂಡ ಸಂಪತ್ತನ್ನು ತಿರಸ್ಕರಿಸುತ್ತಿಲ್ಲ. ಅಧ್ಯಾತ್ಮವನ್ನು ಶ್ರೀಮಂತಗೊಳಿಸುವ ವಿಧಾನಗಳು ಕೂಡ ಆವಿಷ್ಕಾರಗೊಳ್ಳುತ್ತಿವೆ. ಮನಃಶಾಂತಿಯನ್ನು ಹುಡುಕುತ್ತಾ ಪಾಶ್ಚಿಮಾತ್ಯರು ನಮ್ಮಲ್ಲಿಗೆ ಬರುವುದು, ನಮ್ಮಲ್ಲಿನ ಶ್ರೀಮಂತರು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಗುವುದು ಸಾಮಾನ್ಯವಾಗಿದೆ...' ಎಂದು ಹೇಳುತ್ತಾ ನಾನೂ ಗ್ಲಾಸಿನಲ್ಲಿದ್ದ ವಿಸ್ಕಿಯನ್ನು ಖಾಲಿ ಮಾಡಿದ್ದೆ. ಭಗವಾನ್ ಮತ್ತೆ ಇಬ್ಬರಿಗೂ ಒಂದೊಂದು ಪೆಗ್ ವಿಸ್ಕಿಯನ್ನು ನೀರಿನೊಂದಿಗೆ ಹದವಾಗಿ ಬೆರೆಸಿ ತಂದಿಟ್ಟಿದ್ದ. 'ಡ್ರಿಂಕ್ಸ್ ಸಾಕು ಭಗವಾನ್, ಇದು ಮುಗಿದ ತಕ್ಷಣ ಊಟ ಮಾಡೋಣ' ಎಂದ ಕೆ.ಎಮ್. ನಯ್ಯಾರ್ ನನ್ನ ಕಡೆ ದೃಷ್ಟಿ ನೆಟ್ಟು, 'ಎಷ್ಟು ಚನ್ನಾಗಿ ಹೇಳಿದಿರಿ. ನನಗೆ ಸಮಾಜಶಾಸ್ತ್ರ ಅಂದರೆ ತುಂಬಾ ಇಷ್ಟ. ಮ್ಯಾಕ್ಸ್‌ವೆಬರ್ ಸೇರಿದಂತೆ ಸುಮಾರು ಜನ ಸಮಾಜಶಾಸ್ತ್ರಜ್ಞರ ಪುಸ್ತಕಗಳನ್ನು ಓದಿದ್ದೀನಿ. ಮೊದಲಿನಂತೆ ನಗರಗಳಲ್ಲಾಗಲೀ, ಹಳ್ಳಿಗಳಲ್ಲಾಗಲೀ ಹಾರಿಜಂಟಲ್ ಸಂಬಂಧಗಳು ಉಳಿದುಕೊಂಡಿಲ್ಲ. ಈಗೇನಿದ್ದರೂ ಗಗನಚುಂಬಿ ಅಪಾರ್ಟ್‌ಮೆಂಟ್‌ಗಳಂತೆ ವರ್ಟಿಕಲ್ ಸಂಬಂಧಗಳು. ಸಮಾನಾಂತರ ಸಂಬಂಧಗಳಲ್ಲಿ ಸಮಾನತೆ, ಪ್ರೀತಿ, ವಿಶ್ವಾಸ, ಸಹಕಾರಗಳು ತುಂಬಿರುತ್ತವೆ. ನಮ್ಮ ಕಮ್ಯುನಿಸ್ಟ್ ಸಿದ್ಧಾತದ ಸಂದೇಶಗಳಂತೆ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಧ್ವನಿ ಇನ್ನೊಬ್ಬ ವ್ಯಕ್ತಿಗೆ ಕೇಳುತ್ತಿರುತ್ತದೆ. ಆದರೆ ವರ್ಟಿಕಲ್ ವ್ಯವಸ್ಥೆಯಲ್ಲಿ ವ್ಯಕ್ತಿಗಳೇ ಒಬ್ಬರಿಗೊಬ್ಬರು ಕಾಣಿಸುವುದಿಲ್ಲ, ಇನ್ನು ಧ್ವನಿಗಳೆಲ್ಲಿ ಕೇಳಿಸುತ್ತವೆ. ನಮ್ಮ ಅಪಾರ್ಟ್‌ಮೆಂಟ್ಸ್‌ಗಳನ್ನು ಸರ್ಕಾರ ಕೆಡವೋದು ಗ್ಯಾರಂಟಿ ಅಂತ ನನಗೆ ಅನ್ನಿಸ್ತಿದೆ. ಆದರೂ ಉಳಿಸಿಕೊಳ್ಳೋಕೆ ಪ್ರಯತ್ನ ಮಾಡ್ತಾ ಇದ್ದೀವಿ. ಒಂದು ವೇಳೆ ನಮ್ಮ ಪ್ರಯತ್ನ ವಿಫಲವಾದರೂ ಅಂಥ ಬೇಸರವೇನೂ ಆಗಲಾರದು. ವ್ಯಾಪಾರದಲ್ಲಿ ಲಾಭ, ನಷ್ಟಗಳು ಇದ್ದದ್ದೇ...' ಆತನ ಮಾತುಗಳೊಂದಿಗೆ ಶುಷ್ಕ ನಗೆ ಕೂಡ ತೆಕ್ಕೆಹಾಕಿಕೊಂಡಂತೆ ಕಂಡಿತ್ತು ನನಗೆ.

'ದಿ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್‌ಗೆ ನೀವೇ ಬೆನ್ನೆಲುಬು ಅನ್ನಿಸುತ್ತದೆ ನನಗೆ. ಎಲ್ಲಾ ಶ್ರೀಮಂತರಿಗೂ, ಉದ್ದಿಮೆದಾರರಿಗೂ ಅಂಥ ವಿಶಾಲವಾದ ಮನೋಭಾವ ಇರಬೇಕಲ್ವಾ...' ಸಹಜವಾಗಿಯೇ ಹೇಳಿದ್ದೆ. ನನ್ನ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದವರಂತೆ ಕೆ.ಎಮ್. ನಯ್ಯಾರ್ ವಿಸ್ಕಿಯನ್ನು ಖಾಲಿ ಮಾಡಿ ಭಗವಾನ್ ಕುಟ್ಟಿಗೆ ಊಟ ಬಡಿಸಲು ಹೇಳಿದ್ದರು. ನಾನೂ ವಿಸ್ಕಿಯನ್ನು ಕುಡಿದು ಮುಗಿಸಿದ್ದೆ. ಭಗವಾನ್ ಕುಟ್ಟಿ ಬಿಸಿಬಿಸಿ ಕುಚ್ಚಿಲಕ್ಕಿ ಅನ್ನ, ಫಿಶ್ ಕರಿ, ಮೊಸರು, ಉಪ್ಪಿನಕಾಯಿ ತಂದಿಟ್ಟಿದ್ದ. ಅನ್ನವನ್ನು ಫಿಶ್ ಕರಿಯಲ್ಲಿ ಕಲಸುತ್ತಾ ಕೆ.ಎಮ್. ನಯ್ಯಾರ್, 'ರಾಘವರೆಡ್ಡಿ ನನ್ನ ಬಗ್ಗೆ ಏನಾದರೂ ಹೇಳಿದ್ದರಾ...' ಎಂದಿದ್ದರು. 'ನಿಮ್ಮದು ಸ್ವಲ್ಪ ಕೆಲಸವಿದೆ ಎಂದು ಹೇಳಿದ್ದರು ಮಾತ್ರ. ನಾವಿಬ್ಬರೂ ಜೊತೆಯಲ್ಲಿಯೇ ಬರಬೇಕಿತ್ತು. ಚೆನ್ನಾಗಿಯೇ ಇದ್ದ ಅವರ ಚಿಕ್ಕಮ್ಮ ಇದ್ದಕ್ಕಿದ್ದಂತೆ ಸತ್ತು ಹೋದರಂತೆ, ನಾಳೆ ಬೆಳಿಗ್ಗೆ ಬರುವುದಾಗಿ ಫೋನ್ ಮಾಡಿದ್ದರು. ಅದಿರಲಿ, ನಾನೊಂದು ವಿಷಯ ಹೇಳ್ತೀನಿ ಬೇಸರ ಮಾಡಿಕೊಳ್ಳಬಾರದು...' ನಾನೂ ಎರಡು ಸೌಟು ಅನ್ನವನ್ನು ತಟ್ಟೆಗೆ ಬಡಿಸಿಕೊಂಡು ಹೇಳಿದ್ದೆ.

ಭಗವಾನ್ ಕುಟ್ಟಿ ಘಮಘಮಿಸುವ ಬಿಸಿಬಿಸಿ ಫಿಶ್ ಕರಿಯನ್ನು ಸುರುವಿದ್ದ. 'ಅರೆ, ಸತ್ಯವನ್ನು ಕೇಳುವಾಗ ಹೇಳುವಾಗ ಒಂದಿಷ್ಟು ಬೇಸರವಾಗುವುದು ಸಹಜ. ಅದನ್ನು ತಡೆದುಕೊಳ್ಳುವ ಶಕ್ತಿ ಸತ್ಯ ಹೇಳುವಾಗಲೂ, ಕೇಳುವಾಗಲೂ ಇರಬೇಕು. ಅಂಥ ಶಕ್ತಿ ಈಗ ನನಗೆ ಕರಗತವಾಗಿಬಿಟ್ಟಿದೆ. ಹೇಳಿ, ಭಗವಾನ್ ಕುಟ್ಟಿ ಇದ್ದರೂ ಪರವಾಗಿಲ್ಲ. ಇನ್ನೊಂದು ಪೆಗ್ ವಿಸ್ಕಿಯನ್ನು ನೀವು ತೆಗೆದುಕೊಳ್ಳುವುದಾದರೆ ನನ್ನ ಅಭ್ಯಂತರವಿಲ್ಲ. ಮದ್ಯ ಸೇವಿಸಿದಾಗ ಮನುಷ್ಯನಿಗೆ ಸತ್ಯ ಹೇಳುವ ಧೈರ್ಯ, ಶಕ್ತಿ ಎರಡೂ ಲಭ್ಯವಾಗುತ್ತವೆ. ನೂರಾರು ಸಾರಿ ನಮ್ಮ ಕಾರ್ಮಿಕರ ಮೇಲೆ ಈ ಪ್ರಯೋಗವನ್ನು ಮಾಡಿ ಅನೇಕ ರಹಸ್ಯಗಳನ್ನು ಬಯಲು ಮಾಡಿದ್ದೇನೆ ನಾನು...' ಎಂದು ಹೇಳಿ ನಕ್ಕು ಅನ್ನದ ತುತ್ತನ್ನು ಬಾಯಿಗಿಟ್ಟುಕೊಂಡಿದ್ದರು.

ಭಗವಾನ್ ಕುಟ್ಟಿ ಅದೇನೋ ಹೇಳುವುದು ಹೇಳಿಬಿಡಿ ಎನ್ನುವಂತೆ ನನ್ನ ಕಡೆ ನೋಡಿ ಸನ್ನೆ ಮಾಡಿದ್ದ! 'ನಾನು ಪಿಎಚ್.ಡಿ. ಮಾಡುವ ಸಂದರ್ಭದಲ್ಲಿ ಅನೇಕ ಪುಸ್ತಕಗಳನ್ನು ಓದುತ್ತಿರುವಾಗ ಡಾಕ್ಟರ್ ರಾಮ ಮನೋಹರ್ ಲೋಹಿಯಾರ ಪುಸ್ತಕವನ್ನೂ ಓದಿದ್ದೆ. ಅದರಲ್ಲೊಂದು ಆಶ್ಚರ್ಯಕರವಾದ ಸಂಗತಿಯೊಂದನ್ನು ಗಮನಿಸಿದ್ದೆ. ಅದರಲ್ಲಿ ಲೋಹಿಯಾ ಹೇಳ್ತಾರೆ: ಮಾರ್ಕ್ಸ್ ವಾದದಲ್ಲಿ ನಿಷ್ಣಾತವಾದವನು ಸುಳ್ಳನೂ, ಒರಟು ನಡತೆಯುಳ್ಳವನೂ, ಕೊಲೆ ಪಾತಕಿಯೂ ಆಗಿರಬಹುದು. ಆದರೆ ಸ್ವಂತ ಸ್ವತ್ತನ್ನು, ಸಂಪತ್ತನ್ನು ಮಾಡಿಕೊಳ್ಳುವುದರ ಬಗ್ಗೆ ವ್ಯಾಮೋಹಗ್ರಸ್ಥನಾಗಿರಲಾರ. ಅದು ಮಾರ್ಕ್ಸ್ ವಾದದ ದೊಡ್ಡ ಮತ್ತು ಅಪರೂಪದ ಗುಣ...' ನಾನು ಮಾತನ್ನು ನಿಲ್ಲಿಸಿದ್ದೆ. 'ಓಹ್ , ಇದನ್ನು ನಾನು ಎಲ್ಲಿಯೂ ಓದಿರಲಿಲ್ಲ, ಕೇಳಿಯೂ ಇರಲಿಲ್ಲ. ನನಗೆ ಕೆಲವು ಕಾಲ ಜಗತ್ತಿನ ಪ್ರಖ್ಯಾತ ಮನಃಶಾಸ್ತ್ರಜ್ಞ ಸಿಗ್ಮಂಡ್ ಫ್ರಾಯ್ಡ್ ತುಂಬಾ ಕಾಡಿದ್ದ. ಎಂಥ ಅದ್ಭುತ ವಾಸ್ತವ ಸತ್ಯಗಳನ್ನು ಹೇಳುತ್ತಾನೆ ಅವನು. ಒಂದು ಕಡೆ ಫ್ರಾಯ್ಡ್ ಹೇಳ್ತಾನೆ: 'ನಾನು ಸಾವಿರಾರು ಜನರ ಜೀವನ ಕಥೆಯನ್ನು ಕೇಳಿದ್ದೇನೆ. ಅವರಲ್ಲಿ ಅತ್ಯಂತ ಶ್ರೀಮಂತರೂ, ಅತ್ಯಂತ ಬಡವರೂ ಇದ್ದಾರೆ. ಇವರೆಲ್ಲರ ಕಥೆಗಳನ್ನು ಕೇಳಿದ ನಂತರ ನಾನೊಂದು ತೀರ್ಮಾನಕ್ಕೆ ಬಂದಿದ್ದೇನೆ. ಯಾವಾಗಲೂ ಪ್ರತಿಯೊಬ್ಬ ವ್ಯಕ್ತಿಯೂ ದುಃಖದಲ್ಲಿಯೇ ಇರುವಂತೆ ವಿಧಿಲಿಖಿತವಾಗಿದೆಯೆನಿಸುತ್ತದೆ. ಅದಕ್ಕೆ ಕಾರಣವೇನೆಂದರೆ ವಾಸ್ತವವಾಗಿ ಪ್ರತಿಯೊಬ್ಬ ವ್ಯಕ್ತಿಗೂ ತನಗೇನು ಬೇಕೆಂದು ತಿಳಿಯದೆ ಇರುವುದು...' ಎಂಥ ಮಜಾ ಅಲ್ವಾ ಫ್ರಾಯ್ಡ್. ಮನುಷ್ಯನ ದೇಹ ಮತ್ತು ಮನಸ್ಸುಗಳ ಆಲಾಪನೆಗಳನ್ನು ಅವನು ದಟ್ಟವಾಗಿ, ಧೈರ್ಯದಿಂದ ಅನಾವರಣಗೊಳಿಸಿದಂತೆ ಬೇರೆ ಯಾರೂ ಮಾಡಲು ಸಾಧ್ಯವಾಗಲಿಲ್ಲ ಅನ್ನಿಸುತ್ತದೆ...' ಎಂದು ಊಟ ಮಾಡತೊಡಗಿದರು. ಹತ್ತು ನಿಮಿಷದಲ್ಲಿ ಇಬ್ಬರದೂ ಊಟ ಮುಗಿದಿತ್ತು.

'ಓಕೆ. ಒಳ್ಳೆ ನಿದ್ದೆ ಮಾಡಿ, ನಾಳೆ ರಾಘವರೆಡ್ಡಿಯೂ ಬರ್ತಾರೆ. ಮಾಧವನ್ ಪಿಳ್ಳೈ ಜೊತೆ ಕನ್ಯಾಕುಮಾರಿಗೆ ಒಂದು ಎಲ್‌ಎಸ್ಡಿ ಟ್ರಿಪ್ ಹೋಗಿಬರೋಣ. ಗುಡ್ ನೈಟ್.' ಅವರ ಮಾತುಗಳು ಮುಗಿಯುವುದರೊಂದಿಗೆ ನಾನು ಎದ್ದು ನನ್ನ ರೂಮಿನ ಕಡೆ ಹೊರಟಿದ್ದೆ. ಭಗವಾನ್ ಕುಟ್ಟಿ ಕೂಡ ಕೈ ಸನ್ನೆಯ ಮೂಲಕ ಗುಡ್ ನೈಟ್ ಹೇಳಿದ್ದ. ನಾನೂ ಅವನ ಕಡೆ ಕೈ ಬೀಸಿ ಗುಡ್ ನೈಟ್ ಹೇಳಿದ್ದೆ. ಆದರೆ ತಕ್ಷಣವೇ ಮನಸ್ಸಿನಲ್ಲಿ ಎಲ್‌ಎಸ್ಡಿ ಟ್ರಿಪ್ ಎಂದರೇನೆಂಬ ಪ್ರಶ್ನೆ ಉದ್ಭವಿಸಿ ಸನ್ನೆಯ ಮೂಲಕ ಭಗವಾನ್ ಕುಟ್ಟಿಯನ್ನು ಹತ್ತಿರ ಕರೆದಿದ್ದೆ. ನನ್ನ ಕೊಠಡಿಯ ಬಾಗಿಲುವರೆಗೂ ಬಂದ ಭಗವಾನ್ ಕುಟ್ಟಿ 'ಏನಾದರೂ ಬೇಕಾ, ಇಲ್ಲಿ ಒಂಟಿಯಾಗಿ ಮಲಗಲು ಅಂಥ ಭಯವೇನೂ ಆಗುವುದಿಲ್ಲ, ಏನಾದರೂ ಬೇಕಿದ್ದರೆ ಬೆಲ್ ಮಾಡಿ ಎಂಥ ನಿದ್ದೆಯಲ್ಲಿದ್ದರೂ ನನಗೆ ಎಚ್ಚರವಾಗಿಬಿಡುತ್ತದೆ...' ಎಂದಿದ್ದ.

'ಅಂಥ ಭಯದ ವಾತಾವರಣವೇನೂ ನನಗಿಲ್ಲಿ ಕಾಣುತ್ತಿಲ್ಲ. ಎಲ್‌ಎಸ್ಡಿ ಟ್ರಿಪ್ ಎಂದರೇನು. ಅರ್ಥವಾಗಲಿಲ್ಲ ನನಗೆ' ಎಂದೆ. 'ಓಹೋ ಅದಾ, ನಾಳೆ ಹೇಗೂ ಟ್ರಿಪ್ ಇದೆಯಲ್ಲಾ, ನಾನೂ ಇರ್ತೀನಿ. ಅದರ ಬಗ್ಗೆ ಕೇಳುವುದಕ್ಕಿಂತ ಅನುಭವಿಸೋದಿದೆಯಲ್ಲ... ತಿಳಿಯುತ್ತದೆ ನಿಮಗೆ. ಕೆ.ಎಮ್. ನಯ್ಯಾರ್ ಅದರ ಬಗ್ಗೆ ಅದ್ಭುತವಾಗಿ